ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್ ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 24|Udp/1263/2015-17 || R.NO.50495/91 ॥ ತಾರೀಕು : 27–06–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

ಕರ್ನಾಟಕ ಕರಾವಳಿಯವರಿಗೆ ಸಿಹಿ ಸುದ್ದಿ
ಅಸ್ಸಾಂ, ಡಾರ್ಜಲಿಂಗ್, ನೀಲಗಿರಿ ಚಹಾ ತೋಟಗಳ, ಚಹಾ ಗಿಡಗಳ ಚಿಗುರಿನಿಂದ ತಯಾರಿಸಿದ ಶುದ್ಧ ಚಹಾ,
35 ವರ್ಷಗಳಿಂದ ಮಲೆನಾಡಿನಲ್ಲಿ ಮನೆಮಾತಾಗಿದೆ. ಶುದ್ಧ 'ಚಿಗುರ್ ಚಹಾ' ಈಗ ಕರಾವಳಿಯಲ್ಲೂ ಲಭ್ಯ.
ಯಾವುದೇ ಬೆರೆಕೆ ಇಲ್ಲದ ಕೇವಲ ಚಹಾ ಚಿಗುರಿನ 'ಚಿಗುರ್ ಚಹಾ' ಸವಿಯಿರಿ
ಕುಂದಾಪುರ – ಕಾರ್ಕಳ – ಉಡುಪಿ ತಾಲ್ಲೂಕುಗಳಲ್ಲಿ
ಪ್ರಾದೇಶಿಕ ವಿತರಕರು ಬೇಕಾಗಿದ್ದಾರೆ
ಸಂಪರ್ಕಿಸಿರಿ : 9844867231
ಚಿಗುರ್ ಚಹಾ
ಚಿಗುರ್ ಚಹಾ

## ಕೆಡಿಪಿ ಸಭೆಯ ಚರ್ಚೆ :ಬಸ್ ನಿಲುಗಡೆ, ಆರೋಗ್ಯಕೇಂದ್ರ, ಅಧಿಕಾರಿಗಳ ನಿರ್ಲಕ್ಷ್ಯ

ಕುಂದಾಪುರ ತಾ.ಪಂ. ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಬಸ್ ನಿಲುಗಡೆ, ಆರೋಗ್ಯ ಸೇವೆ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯಗಳ ಬಗ್ಗೆ ಹೆಚ್ಚು ವಿಚಾರ ವಿನಿಮಯ, ಚರ್ಚೆ ನಡೆಯಿತು.

ಶಾಸಕ ಕೆ.ಗೋಪಾಲ ಪೂಜಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗೌರಿ ದೇವಾಡಿಗ, ಲಕ್ಷ್ಮೀ ಮಂಜು ಬಿಲ್ಲವ, ಶ್ರೀಲತಾ ಶೆಟ್ಟಿ, ಸುರೇಶ ಬಟ್ವಾಡಿ, ಶಂಕರ ಪೂಜಾರಿ ಮುಂತಾದವರು ಕೆರ್ಗಾಲ್, ಕೋಡಿ, ಮದೂರು, ಬೇಳೂರು, ಶಿರಿಯಾರ ಬಸ್ ಸಂಚಾರದ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದರು.

ಸರಕಾರಿ ಆಸ್ಪತ್ರೆಯ ಸಿಬ್ಬಂದಿಗಳ ನಡವಳಿಕೆ ಬಗ್ಗೆ, ತಾ.ಪಂ. ಉಪಾಧ್ಯಕ್ಷ ಪ್ರವೀಣ್ ಕುಮಾರ್, ಶೋಭಾ ಪುತ್ರನ್ ಆಕ್ಷೇಪ ವ್ಯಕ್ತಪಡಿಸಿದರು.

ವೈದ್ಯಾಧಿಕಾರಿ ಡಾ|ಉದಯ ಶಂಕರ್ ಇನ್ನು ಮುಂದೆ ಅಂತಹ ತಪ್ಪುಗಳಾಗದಂತೆ ಎಚ್ಚರಿಕೆ ವಹಿಸಲಾಗುವುದು ಎಂದರು.

ಪ್ರಸನ್ನ ಕುಮಾರ್ ಶೆಟ್ಟಿ, ಬಾಬು ಶೆಟ್ಟಿ ಶಿಕ್ಷಣ ಇಲಾಖೆಯ ನ್ಯೂನ್ಯತೆ, ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಬಗ್ಗೆ ಪ್ರಸ್ತಾಪಿಸಿದರು.

ತಹಶೀಲ್ದಾರ್ ಬೋರ್ಕರ್ ಮಾತನಾಡಿ 94 ಸಿ ಬಾಕಿ ಉಳಿದ ಅರ್ಜಿಗಳ ವಿಲೇವಾರಿಯನ್ನು ಶೀಘ್ರವಾಗಿ ನಡೆಸಲಾಗುವುದು ಎಂದರು.

ತಾ.ಪಂ. ಅಧ್ಯಕ್ಷೆ ಜಯಶ್ರೀ ಮೊಗವೀರ, ಜಿ.ಪಂ. ಸದಸ್ಯ ಬಾಬು ಶೆಟ್ಟಿ, ತಾ.ಪಂ. ಅಧಿಕಾರಿಗಳು ಭಾಗವಹಿಸಿದ್ದರು.

ಶಾಸಕ ಕೆ.ಗೋಪಾಲ ಪೂಜಾರಿ ಸದಸ್ಯರ ಎಲ್ಲಾ ಅಹವಾಲುಗಳನ್ನು ಶೀಘ್ರ ಪರಿಗಣಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

## ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಸೌರಶಕ್ತಿ ಉತ್ಪಾದನಾ ಘಟಕ ಉದ್ಘಾಟನೆ



ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ 100 ಕಿಲೋ ವಾಟ್ ಸಾಮರ್ಥ್ಯದ ಸೌರಶಕ್ತಿ ಉತ್ಪಾದನಾ ಘಟಕದ ಉದ್ಘಾಟನೆಯನ್ನು ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಇದರ ಆಡಳಿತಾಧಿಕಾರಿಗಳಾದ ಡಾ.ಎಚ್.ಶಾಂತಾರಾಮ್ ಅವರು ನೆರವೇರಿಸಿದರು.

ಈ ಘಟಕವು ದಿನವೊಂದಕ್ಕೆ ಸರಾಸರಿ 400 ರಿಂದ 450 ಯುನಿಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿದೆ. ಕಾಲೇಜಿಗೆ ಅಗತ್ಯವಿರುವ ವಿದ್ಯುತ್ತನ್ನು ಪೂರ್ಣವಾಗಿ ಪೂರೈಸುತ್ತದೆ. ಇದರಿಂದಾಗಿ ಕಾಲೇಜು ವಿದ್ಯುತ್ ಸ್ವಾವಲಂಬಿಯಾಗಿದೆ.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ಪಿ. ನಾರಾಯಣ ಶೆಟ್ಟಿ, ಕಾಲೇಜಿನ ಅಧೀಕ್ಷಕಿ ಶೋಭಾ, ಮಂಗಳೂರು ವಿದ್ಯುಚ್ಛಕ್ತಿ ನಿಗಮ ನಿಯಮಿತದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಶೋಕ್ ಪೂಜಾರಿ, ಟಾ ಟಾ ಸೋಲಾರ್ ಇದರ ಚಾನೆಲ್ ಪಾಲುದಾರರಾದ ವಿಜಯಚಂದ್ರ ರಾವ್, ಉಮೇಶ್ ರಾವ್, ಸೂರ್ಯನಾರಾಯಣ ರಾವ್, ಸಚಿನ್ ಶಿರೂರು ಉಪಸ್ಥಿತರಿದ್ದರು.

# ಗೋಪಾಡಿ ಅಚ್ಯುತರಾವ್, ತೆಕ್ಕಟ್ಟೆ ರಾಘವೇಂದ್ರ ರಾವ್ ಮತ್ತು ಕನ್ನುಕೆರೆ ರಾಘವೇಂದ್ರ ರಾವ್ ಅವರಿಗೆ ಆತಿಥ್ಯ ರತ್ನ , ಉದ್ಯಮ ರತ್ನ ಪ್ರಶಸ್ತಿ



ಗೋಪಾಡಿ ಅಚ್ಯುತರಾವ್
ಆತಿಥ್ಯ ರತ್ನ ಪ್ರಶಸ್ತಿ ಪುರಸ್ಕೃತರು



ಟಿ.ಎನ್.ರಾಘವೇಂದ್ರ ರಾವ್
ಆತಿಥ್ಯ ರತ್ನ ಪ್ರಶಸ್ತಿ ಪುರಸ್ಕೃತರು



ಕೆ.ಎಚ್.ರಾಘವೇಂದ್ರ ರಾವ್
ಉದ್ಯಮ ರತ್ನ ಪ್ರಶಸ್ತಿ ಪುರಸ್ಕೃತರು

ಕರ್ನಾಟಕ ರಾಜ್ಯ ಹೋಟೇಲ್ ಮತ್ತು ಉಪಾಹಾರ ಮಂದಿರಗಳ ಸಂಘದ ಆಶ್ರಯದಲ್ಲಿ ಜುಲೈ 1 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಕುಂದಾಪುರ ತಾಲ್ಲೂಕಿನ ಹಿರಿಯ ಹಾಗೂ ಸಾಧಕ ಹೋಟೇಲು ಉದ್ಯಮಿಗಳಾದ ಗೋಪಾಡಿಯ ಅಚ್ಯುತರಾವ್ ಚಿತ್ರದುರ್ಗ , ತೆಕ್ಕಟ್ಟೆಯ ಟಿ.ಎನ್.ರಾಘವೇಂದ್ರ ರಾವ್ ಬೆಂಗಳೂರು ಇವರು ಆತಿಥ್ಯರತ್ನ ಪ್ರಶಸ್ತಿಯಿಂದ ಪುರಸ್ಕೃತರಾಗಲಿದ್ದಾರೆ. ಹಾಗೂ ಕನ್ನುಕೆರೆಯ ಕೆ.ಎಚ್.ರಾಘವೇಂದ್ರ ರಾವ್ ಬೆಂಗಳೂರು ಇವರು ಉದ್ಯಮ ರತ್ನ ಪ್ರಶಸ್ತಿಯಿಂದ ಪುರಸ್ಕೃತರಾಗಲಿದ್ದಾರೆ. ಈ ಮೂವರು ಉತ್ತಮ ಸಮಾಜ ಸೇವಕರಾಗಿದ್ದು ಸಾಮಾಜಿಕ ಕ್ಷೇತ್ರದಲ್ಲಿ ದಾನ, ಧರ್ಮ ಹಾಗೂ ಉತ್ತಮ ಚಟುವಟಿಕೆಗಳ ಮೂಲಕ ಖ್ಯಾತರಾದವರು. ಅಚ್ಯುತರಾವ್ ಅವರು ಚಿತ್ರದುರ್ಗದಲ್ಲಿ ಉಪಾಧ್ಯ ರೆಸ್ಟೋರೆಂಟ್ ನಡೆಸುತ್ತಿದ್ದಾರೆ. ಟಿ.ಎನ್.ರಾಘವೇಂದ್ರ ರಾವ್ ಅವರು ಬೆಂಗಳೂರಿನ ಆನಂದ ರಾವ್ ಸರ್ಕಲ್‌ನ ದ್ವಾರಕಾ ಕಾಂಪ್ಲೆಕ್ಸ್‌ನಲ್ಲಿ ಉಡುಪಿ ಉಪಾಹಾರ್ ನಡೆಸುತ್ತಿದ್ದಾರೆ. ಕೆಎಚ್.ರಾಘವೇಂದ್ರ ರಾವ್ ಅವರು ಇನ್‌ಫೆಂಟ್ರಿ ರಸ್ತೆಯಲ್ಲಿ ಹೋಟೆಲ್ ಚೌರಾನ್ ನಡೆಸುತ್ತಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎನ್.ರಾಘವೇಂದ್ರ ರಾವ್ ಇವರನ್ನು ಅಭಿನಂದಿಸಿ ಶುಭಕೋರಿದ್ದಾರೆ.

KMC HOSPITAL
ATTAVAR, MANGALURU
An associate Hospital of Manipal University
Manipal ArogyaCard
ಮಣಿಪಾಲ್ ಆರೋಗ್ಯಕಾರ್ಡ್, ಕಾರ್ಡ್ ಸಣ್ಣದು, ಸೌಲಭ್ಯ ದೊಡ್ಡದು.
ಇಂದೇ ಸದಸ್ಯರಾಗಿರಿ
ಕುಂದಾಪುರ ಆಸುಪಾಸಿನವರು ಅಧಿಕೃತ ಆರೋಗ್ಯ ಕಾರ್ಡ್ ಪ್ರತಿನಿಧಿಗಳನ್ನು ಸಂಪರ್ಕಿಸಲು ಕರೆ ಮಾಡಿರಿ.
ಕುಂದಾಪುರ: 9663372919, 9242401083, 9901517981, 9480401782, 9739977535, 9886626593;
ಉಪ್ಪುಂದ: 9902205902; ಬೈಂದೂರು: 9448107165;
ತಲ್ಲೂರು: 8151020054;
ಶಿರೂರು: 9740967136, 9449333166;
ಭಟ್ಕಳ: 9448318776, 9900974414, 9019735034; ಮುರ್ಡೇಶ್ವರ: 9620253706
Now apply for Manipal ArogyaCard
http://mangalore.manipalhospitals.com/arogya-card/

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ
VB
ವಸಂತ ಬೇಕರಿ
ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.
ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ
ಫೋನ್ : 08254–230503, ಮೊ: 9448171188